**ಓ.ಎಸ್.ನಂ. 328/2021**

**ಡಿ .ಡಬ್ಲ್ಯು:1**

ದಿನಾಂಕಃ 04-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಎಂ. ಎನ್ ವಾದಿ ಪರ ವಕೀಲರಿಂದಃ-**

ಈಗಲೂ ಸಹ ನಮ್ಮ ಕಟ್ಟಡದಲ್ಲಿ ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಎಂಬ ಹೆಸರಿನಲ್ಲಿ ಬಾರ್ ಅಂಡ್ ರೆಸ್ಟೋರೆಂಟ್ ಇರುತ್ತದೆ ಎಂದರೆ ಸರಿ. ನನ್ನದು ಆ್ಯಕ್ಸಿಸ್ ಬ್ಯಾಂಕ್ ನಲ್ಲಿ ಅಕೌಂಟ್ ಇರುತ್ತದೆ ಎಂದರೆ ಸರಿ. ನನಗೆ ರವಿಕುಮಾರ್ ಬಿನ್ ಚಿಕ್ಕಣ್ಣ ಆಡಿಗೆರೆ ಯವರು ಸುಮಾರು 15-20 ವರ್ಷಗಳಿಂದ ನನಗೆ ಗೊತ್ತಿರುತ್ತಾರೆ. ಸದರಿ ರವಿಕುಮಾರ್ ಬಿನ್ ಚಿಕ್ಕಣ್ಣರವರು ಈ ದಾವೆಯ ವಾದಿಗೆ ಪರಿಚಯ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಸೇರಿದ ಸುಮಾರು ಒಟ್ಟು 10 ಮಳಿಗೆಗಳು ಇರುತ್ತವೆ. ನಾನು ಸದರಿ ಮಳಿಗೆಗಳಿಗೆ Square Feet ಲೆಕ್ಕದಲ್ಲಿ ಪುರಸಭೆಗೆ ಕಂದಾಯವನ್ನು ಪಾವತಿಸುತ್ತೇನೆ. 2018-2021 ರವರೆಗೂ ನಾನು ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಗೆ ಸಂಬಂಧಿಸಿದಂತೆ ಲೈಸೆನ್ಸ್ ರಿನೀವಲ್ ಶುಲ್ಕವಾಗಲೀ ಅಥವಾ ತೆರಿಗೆ ಮತ್ತು ವಿದುತ್ ಶುಲ್ಕವನ್ನು ನಾನೇ ಪಾವತಿಸಿರುತ್ತೇನೆ. ಈ ದಾವೆಯನ್ನು ವಾದಿಯು ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಗೆ ಸಂಬಂಧಿಸಿದ ವಿಚಾರವಾಗಿಯೇ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. 2018-2021 ರ ವರೆಗೆ ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಗೆ ಸಂಬಂಧಿದಂತೆ ನಾನು ಪಾವತಿಸಿದ ಶುಲ್ಕ ಮಜತ್ತು ತೆರಿಗೆಗಳ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ರವಿಕಮಾರ್ ಬಿನ್ ಚಿಕ್ಕಣ್ಣ ಆಡಿಗೆರೆ ರವರ ಸಮ್ಮುಖದಲ್ಲಿ ನಾನು ಮತ್ತು ವಾದಿಯು ಸೇರಿ ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಗೆ ಸಂಬಂಧಿಸಿದಂತೆ ಒಪ್ಪಂದದ ಕರಾರು ಪತ್ರವನ್ನು 2018 ರಲ್ಲಿ ಮಾಡಿಕೊಂಡಿರುತ್ತೇವೆ ಎಂದರೆ ನಾನು ಯಾರು ಸಮ್ಮುಖದಲ್ಲೂ ಒಪ್ಪಂದದ ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. 2018-2021 ಸದರಿ ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ನಾನೇ ನಡೆಸುತ್ತಿರುತ್ತೇನೆ. ನಾನು 2018-2021 ರ ವರೆಗೆ ನಕ್ಷತ್ರ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ನಾನು ನಡೆಸುತ್ತಿದ್ದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ಅದೇ ರೀತಿ ರವಿ ಕುಮಾರ್ ಬಿನ್ ಚಿಕ್ಕಣ್ಣ ಆಡಿಗೆರೆ ರವರ ಸಮ್ಮುಖದಲ್ಲಿ ಯಾವುದೇ ಒಪ್ಪಂದ ಕರಾರುಪತ್ರ ಆಗಿರುವುದಿಲ್ಲ ಎಂದು ನಾನು ನುಡಿಯುತ್ತಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**